## ಭಗವಂತನ ಕೊಡುಗೆ

ಎಂತಹುದೇ ಸನ್ನಿವೇಶದಲ್ಲಿಯೂ ಭಗವಂತನನ್ನು ಸ್ಮರಿಸುವವರು ಇಹಲೋಕದಲ್ಲಿ ಹಾಗೂ ಪರಲೋಕದಲ್ಲಿ ಜಯಶಾಲಿಗಳಾಗುತ್ತಾರೆ.

ಭಗವಂತನು ಯಾರು ಒಳಿತನ್ನು ತಿಳಿಯಲು ಆಶೆ ಪಡುತ್ತಾರೆಯೋ ಅಂತಹವರಿಗೆ ಹೆಚ್ಚು ದುಃಖವನ್ನುಂಟು ಮಾಡುತ್ತಾನೆ. ಇಂತಹ ಶೋಧನೆಗಳು ಹೆಚ್ಚಾದಂತೆಲ್ಲಾ ಭಗವಂತನ ಅನುಗ್ರಹವೂ ಹೆಚ್ಚುತ್ತದೆ.

## ಭಗವಂತನ ಕೃಪೆ

ಸಂಸಾರದಲ್ಲಿದ್ದುಕೊಂಡೇ ಜ್ಞಾನಿಗಳಾಗ ಬಯಸುವವರಿಗೆ ಹಿಂದೂ ಧರ್ಮ ಕೃಪಾಕಟಾಕ್ಷ ತೋರುತ್ತದೆ. ವಿದ್ಯೆಯಲ್ಲಿ ಉನ್ನತಿ, ವೃತ್ತಿಯಲ್ಲಿ ಅಭಿವೃದ್ಧಿ ಹಾಗೂ ಸಾಂಸಾರಿಕವಾಗಿ ನೆಮ್ಮದಿ ಪಡೆಯಲು ನಿರಂತರವಾಗಿ ಭಗವಂತನನ್ನು ಮಾನಸಿಕವಾಗಿ ಪೂಜಿಸಬೇಕು. ಅದರೊಂದಿಗೆ ಮಂತ್ರವನ್ನು ಜಪಿಸಿ ಭಗವಂತನನ್ನು ಆರಾಧಿಸಬೇಕು. ಇಂತಹ ಧಾರ್ಮಿಕ ಕ್ರಿಯೆಗಳನ್ನು ಮಾಡುವವರಿಗೆ ಹಿಂದೂ ಧರ್ಮದ ಕೃಪಾಕಟಾಕ್ಷವಿರುತ್ತದೆ.

## ಆರು ಕಾಲ ಪೂಜೆಯಲ್ಲಿ ಸಾಧಕರಾಗುವುದು

**ಮಾನಸಿಕ ಪೂಜೆ ಮಾಡುವ ಕ್ರಮ:** ನಿಮ್ಮ ಮನಸ್ಸಿಗೆ ಹಿತವೆನಿಸಿದ ದೇವಾಲಯವನ್ನು ಮತ್ತೆ ಮತ್ತೆ ನೆನೆಯುತ್ತಾ ಅಲ್ಲಿ ಅರ್ಚಕರು ಭಗವಂತನಿಗೆ ಪೂಜೆ ಮಾಡುವ ರೀತಿಯಲ್ಲಿ ಮಂತ್ರವನ್ನು ಜಪಿಸುತ್ತಾ ಪ್ರದಕ್ಷಿಣೆಯಲ್ಲಿ ಭಗವಂತನ ಬಲಭಾಗಕ್ಕೆ ಬಂದು ನಿಂತು ದೇವರ ಪಾದಪದ್ಮಗಳಿಗೆ ಹೂಗಳನ್ನು ಅರ್ಪಿಸಿ ನಮಸ್ಕರಿಸಬೇಕು. ಹೀಗೆ ಆಚರಿಸಿದರೆ ಸಮಸ್ಯೆಗಳು ಪರಿಹಾರವಾಗುತ್ತವೆ. ನಿಮ್ಮ ವೃತ್ತಿ ಅಭಿವೃದ್ಧಿಯಾಗುತ್ತದೆ. ಆತ್ಮವು ಗೆಲ್ಲುತ್ತದೆ.

## ಆರು ಕಾಲ ಪೂಜೆ ಮಾಡುವ ಸಮಯ

ಬೆಳಗಿನ ಜಾವ 5 ಗಂಟೆ, ಬೆಳಿಗ್ಗೆ 8 ಗಂಟೆ, ಮದ್ಯಾಹ್ನ 12 ಗಂಟೆ, ಸಂಜೆ 4 ಗಂಟೆ, ರಾತ್ರಿ 8 ಗಂಟೆ, ಕೊನೆಯದಾಗಿ ರಾತ್ರಿ ಮಲಗುವ ಮುಂಚೆ.



## ಸಾಮೂಹಿಕ ಪ್ರಾರ್ಥನೆ

ಕೂಡಿ ಬಾಳಿದರೆ ಕೋಟಿ ಸುಖ. ಕೂಡಿ ಪ್ರಾರ್ಥಿಸಿದರೆ ಹಲವು ಕೋಟಿ ಸುಖ. ನಮ್ಮ ಜೀವನದಲ್ಲಿ ಸಕಲ ಸುಖಸಂಪತ್ತಿಗೆ ದಾರಿಯೆಂದರೆ ಸಾಮೂಹಿಕ ಪ್ರಾರ್ಥನೆ. ಈ ಸಾಮೂಹಿಕ ಪ್ರಾರ್ಥನೆಯಲ್ಲಿ ಮೊದಲು ಯಾರಾದರೊಬ್ಬರು ಮಂತ್ರವನ್ನು ಜಪಿಸಬೇಕು. ಅವರನ್ನು ಅನುಸರಿಸಿ ಉಳಿದವರೆಲ್ಲರೂ ಅದನ್ನು ಮತ್ತೆ ಉಚ್ಚರಿಸಬೇಕು.

ಸಾಮೂಹಿಕ ಪ್ರಾರ್ಥನೆಯೆಂದರೆ ಒಂದೇ ಉದ್ದೇಶದಿಂದ ನಾವೆಲ್ಲರೂ ಒಂದೆಡೆ ಸೇರಿ ನಮ್ಮ ಅಂತರಂಗದ ದೇವಾಲಯದಲ್ಲಿರುವ ಭಗವಂತನನ್ನು ಮಂತ್ರದಿಂದ ಜಪಿಸಿ ಆರಾಧನೆ ಮಾಡುವುದು. ಇಂತಹ ಸಾಮೂಹಿಕ ಪ್ರಾರ್ಥನೆಗೆ ಭಗವಂತನು ಕೂಡಲೆ ಕಿವಿಗೊಡುತ್ತಾನೆ.

ಪ್ರತಿದಿನವೂ ಸಾಮೂಹಿಕ ಪ್ರಾರ್ಥನೆ ಮಾಡುವುದರಿಂದ ಕಷ್ಟ ಪರಿಹಾರವಾಗುತ್ತದೆ. ದುರಭ್ಯಾಸಗಳಿಂದ ದೂರವಾಗುತ್ತಾರೆ. ದೇಹಾರೋಗ್ಯ ಸಧಾರಿಸುತ್ತದೆ. ಬಡತನ ನೀಗುತ್ತದೆ. ಸಕಲ ಸಂಪತ್ತು ದೊರಕುತ್ತದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : 8680082425 / 04545–225567

**ಉತ್ತಮ ಆಧ್ಯಾತ್ಮಿಕ ಜೀವನಕ್ಕೆ ಹಿಂದೂ ಧರ್ಮದ ಮಾರ್ಗದರ್ಶನ ಪುಸ್ತಕದ ಬೆಲೆ ರೂ. 10/-**

**ಯುವಜನರ ಮುನ್ನಡೆಗಾಗಿ ಹಿಂದೂ ಧರ್ಮವು ಬೋಧಿಸುವ ವಿಧಿವಿಧಾನಗಳು : ಬೆಲೆ ರೂ. 10/-**

ಹಿಂದೂ ಧರ್ಮದ ಬಗೆಗೆ ಹೆಚ್ಚು ವಿವರಗಳುಳ್ಳ ಎರಡು ಆಧ್ಯಾತ್ಮಿಕ ಗ್ರಂಥಗಳು. **ಬೆಲೆ ರೂ. 10/-** ಸಂಪರ್ಕಿಸಿ : 97506 82449

**ಹಿಂದೂ ಯುವಜನ ಆಸ್ತಿಕ ಸೇವಾ ಸಂಘ**

**HINDU YOUTH SPIRITUAL SEVA SANGAM**

&

**ಹಿಂದೂ ಸಂಘಟನಾ ಜಾಗೃತಿ ಪರಿಷತ್ತು**

**HINDU UNITED PROGRESSIVE MOVEMENT**

Dhuraimurugar Shiva Meditation Sabha,
Palani-Dindigul Main Road, Kanakkanpatti Post,
PALANI, DINDIGUL Dist. - 624 613, TAMILNADU.
ವೆಬ್ ಸೈಟ್ : www.templedivinesuccess.com & www.hinduupm.co.in
ಭಗವಂತನ ಸೇವೆಗ್ಯೆಯಲು ಸಂಪರ್ಕಿಸಿ : karnatakahinduupm@gmail.com

ಎಂದೆಂದಿಗೂ ದೈವಿಕ ಚಿಂತನೆಯಲ್ಲಿ:
**SREE SARABESWARA LAND FOUNDATION**
**M. Ethiraj**
**Ph: 97898 77304 / 95432 92559**

ಈ ಪ್ರತಿಯನ್ನು ಪ್ರತಿಯೊಬ್ಬರೂ ಓದಿ ಭಕ್ತಿಮಾರ್ಗದಲ್ಲಿ ಶ್ರೇಯಸ್ಸು ಪಡೆಯಲು ಹಾಗೂ ಮುದ್ರಿಸಿ ಹಂಚಲು ಸಂಪರ್ಕಿಸಿ:

**HINDU UPM**

Regd : 185/4-2012 www.hinduupm.co.in

ಓಂ ನಮಃ ಶಿವಾಯ

# ಹಿಂದೂ ಧರ್ಮ ಒಂದು ಹಿತವಾದ ಧರ್ಮ

ಇದೇ ನಮ್ಮ ವಿಜಯದ ಕೀಲಿಕೈ

## ಭಗವಂತನ ಅನುಗ್ರಹ ಪಡೆಯಲು ನಮಗೆ ಅಗತ್ಯವಿರುವ ಗುಣಗಳು

1. ಮನಸ್ಸು ಭಗವಂತನಲ್ಲಿ ಲೀನವಾಗಿರಬೇಕು
2. ಮಂತ್ರವನ್ನು ಜಪಿಸಿ ಧ್ಯಾನಮಾಡಬೇಕು
3. ಭಗವಂತನಲ್ಲಿ ಶರಣಾಗಬೇಕು

## ಗೀತೆಯ ಪ್ರಕಾರ ಪುಣ್ಯಕಾರ್ಯಗಳು

1. ಪೂಜಿಸುವುದು 2. ದಾನ 3 ತಪಸ್ಸು

ಈ ಮೂರು ಪುಣ್ಯಕಾರ್ಯಗಳು ಮಾನವ ಜೀವನವನ್ನು ಉನ್ನತಿಗೇರಿಸುತ್ತದೆ. – ಭಗವದ್ಗೀತೆ. (18.5)

ಜೀವನದಲ್ಲಿ ಗೆಲುವನ್ನು ಸಾಧಿಸಲು ನಮಗೆ ಪ್ರಿಯವಾದ ದೇವಾಲಯವನ್ನು ಮನಸ್ಸಿನಲ್ಲಿ ನೆನೆದು ಪ್ರತಿದಿನವೂ ಹೇಳಬೇಕಾಗಿರುವ ಮೂಲ ಮಂತ್ರ

**ಓಂ ಶಿವಾಯ ನಮಃ !**

**ಓಂ ಸಚ್ಚಿದಾನಂದಾಯ ನಮಃ !**

**ಓಂ ಸದ್ಗುರುನಾಥಾಯ ನಮಃ !**

**(ಅಥವಾ)**

**ಓಂ ನಾರಾಯಣಾಯ ನಮಃ !**

KANNADA

## ಹಿಂದೂ ಧರ್ಮದ ವೈಶಿಷ್ಟ್ಯ

ಹಿಂದೂ ಧರ್ಮವನ್ನು 'ಸನಾತನ ಧರ್ಮ' ಎಂಬ ಹೆಸರಿನಲ್ಲಿ ಕರೆಯಲಾಗುತ್ತದೆ. ಇದರ ಅರ್ಥ ಅಳಿವಿಲ್ಲದ ಧರ್ಮ ಎಂದು. ಅಲ್ಲದೆ ಹಿಂದೂ ಧರ್ಮ ಸನ್ಮಾರ್ಗ, ತಪೋಮಾರ್ಗ, ಸತ್ಯಮಾರ್ಗ, ಕರುಣಾಮಾರ್ಗ, ಪುಣ್ಯಮಾರ್ಗ ಮುಂತಾದ ಹೆಸರುಗಳಲ್ಲಿಯೂ ಪ್ರಸಿದ್ಧಿ ಪಡೆದಿದೆ.

ಅಹಂಕಾರ, ಕಾಮ, ದುರಾಸೆ, ವ್ಯಾಮೋಹ ಇವುಗಳನ್ನು ತೊರೆದು ಸುಖದುಃಖಗಳನ್ನು ಗೆದ್ದು ಆತ್ಮಜ್ಞಾನದಲ್ಲಿ ಅನುಭವ ಪಡೆದು ಆತ್ಮದ ನಿಜಸ್ವರೂಪವನ್ನು ಅರಿತು ಜೀವನ್ಮುಕ್ತಿಯನ್ನು ಪಡೆಯಲು ಹಿಂದೂಧರ್ಮ ನೆರವಾಗುತ್ತದೆ.

## ಉತ್ತಮೋತ್ತಮ ಹಿಂದೂ ಧರ್ಮ ಬೋಧಿಸುವ ಮೂರು ಬಗೆಯ ಆಚರಣೆಗಳು

1. ಸಗುಣೋಪಾಸನೆ – (ವಿಗ್ರಾಹಾರಾಧನೆ)
2. ನಿರ್ಗುಣೋಪಾಸನೆ – (ಎಲ್ಲದರಲ್ಲಿಯೂ ಭಗವಂತನನ್ನು ಕಾಣುವುದು)
3. ಸಗುಣ ಸಾಕ್ಷಾತ್ಕಾರ – (ಅವತಾರ ಪುರುಷರ ಆರಾಧನೆ)

## ಶೈವ ಮತ್ತು ವೈಷ್ಣವ

ಪರಶಿವನ ಎಡಭಾಗದಲ್ಲಿ ಮಹಾವಿಷ್ಣು ಆಸೀನನಾಗಿರುವುದಾಗಿ ತೇವಾರದಲ್ಲಿಯೂ ವಿಷ್ಣುವಿನ ಬಲಭಾಗದಲ್ಲಿ ಪರಶಿವನು ಇರುವುದಾಗಿ ದಿವ್ಯಪ್ರಬಂಧದಲ್ಲಿಯೂ ವಿಶೇಷವಾಗಿ ಸ್ತುತಿಸಲಾಗಿದೆ.

ನಮ್ಮ ಪಂಚೇಂದ್ರಿಯಗಳ ಮೂಲಕ ಲಭಿಸುವ ಸಂತೋಷವು ಅನೇಕ ಸಂದರ್ಭಗಳಲ್ಲಿ ಅನಾರೋಗ್ಯದಿಂದ ಇಲ್ಲವೆ ಬೇರೆ ರೀತಿಯ ತೊಂದರೆಗಳಾಗಿ ಮುಗಿಯುವುದುಂಟು. ಅವು ನಮ್ಮ ದಿಕ್ಕನ್ನು ಬದಲಾಯಿಸುತ್ತವೆ, ನೆಮ್ಮದಿಯನ್ನು ಕೆಡಿಸುತ್ತವೆ. ಈ ಕಾರಣದಿಂದ ಪಂಚೇಂದ್ರಿಯಗಳ ಬಾಗಿಲುಗಳನ್ನು ಮುಚ್ಚಿಕೊಂಡು ಅಂತರಂಗದಲ್ಲಿ ಭಗವಂತನನ್ನು ಕಾಣಲು ನಾವು ರೂಢಿಮಾಡಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಇದು ನಮಗೆ ನೆಮ್ಮದಿ ಹಾಗೂ ಆನಂದವನ್ನು ನೀಡುತ್ತದೆ. ಇದನ್ನೇ ಶೈವ ಮತ್ತು ವೈಷ್ಣವ ನಂಬಿಕೆಗಳು ಹಿಂದೂಗಳಿಗೆ ಬೋಧಿಸುವುದು.



## ಸನಾತನ ಹಿಂದೂಧರ್ಮ ಹೇಳುವ ನಿಜವಾದ ಭಕ್ತಿ

1. ಜೀವಜಂತುಗಳೊಡನೆ ಅನುಕಂಪ
2. ಕರುಣೆ
3. ಪರೋಪಕಾರ
4. ತ್ಯಾಗಬುದ್ಧಿ
5. ಎಡೆಬಿಡದ ಧ್ಯಾನ
6. ಲೋಕಕಲ್ಯಾಣಕ್ಕಾಗಿ ದೇವರಲ್ಲಿ ಪ್ರಾರ್ಥನೆ
7. ಸಕಲ ಜೀವರಾಶಿಗಳು ಸುಖವಾಗಿರಬೇಕೆಂದು ಮಾಡುವ ಪ್ರಾರ್ಥನೆ.

ಇವುಗಳನ್ನು ಆಚರಿಸುವವರೇ ನಿಜವಾದ ಧ್ಯಾನ ಮತ್ತು ತಪಸ್ಸನ್ನಾಚರಿಸುವ ಉತ್ತಮ ಮನುಷ್ಯರು.

## ಉತ್ತಮೋತ್ತಮ ಹಿಂದೂಧರ್ಮ ಬೋಧಿಸುವ ಮಾರ್ಗಗಳು

1. ಸನ್ನಡತೆ 2. ಸತ್ಕಾರ್ಯ 3. ಉಸಿರಾಟದ ಹತೋಟಿ
4. ಜ್ಞಾನೇಂದ್ರಿಯದ ಹತೋಟಿ 5. ಭಗವಂತನ ಸ್ಮರಣೆ 6. ಮೋಕ್ಷಸಾಧನೆ
7. ಕುಳಿತುಕೊಳ್ಳುವುದು 8. ಸಮತೋಲನ

ಈ ಎಂಟು ಗುಣಗಳು ನಮ್ಮಲ್ಲಿರುವಾಗ ನಮ್ಮ ಆತ್ಮ ಉನ್ನತಿಗೇರಲು ಹಿಂದೂ ಧರ್ಮ ನಮಗೆ ಮಾರ್ಗದರ್ಶನ ಮಾಡುತ್ತದೆ.

ನಮ್ಮ ಶ್ರೇಷ್ಠ ಹಿಂದೂ ಧರ್ಮ ಜನರಿಗೆ ದೀಪದ ಮನೆಯಾಗಿ ಎತ್ತರದಲ್ಲಿ ನಿಂತು ಜೀವನದ ಸಮುದ್ರತೀರವನ್ನು ತಲುಪಲು ಬೆಳಕಾಗಿ ಮಾರ್ಗದರ್ಶನ ನೀಡುತ್ತದೆ.

ಹಿಂದೂ ಧರ್ಮದಲ್ಲಿ ವೇದ, ಆಗಮ, ಇತಿಹಾಸ, ಪುರಾಣ, ಶಾಸ್ತ್ರ ಎಂಬ ಹಲವು ಗ್ರಂಥಗಳು ಮಾರ್ಗದರ್ಶನ ನೀಡುತ್ತವೆ.

ವೇದವೆಂದರೆ ಜ್ಞಾನವೆಂದು ಅರ್ಥವಿದೆ. ದೈವಿಕವಾದ ವಿಷಯಗಳನ್ನು ವೇದಗಳು ಅಡಗಿಸಿಕೊಂಡಿರುವುದರಿಂದ ಹಿಂದೂ ಧರ್ಮವನ್ನು 'ರಹಸ್ಯ'ವೆಂಬ ಹೆಸರಿನಿಂದ ಕರೆದರು. ಇದರ ಪ್ರಾಚೀನತೆಯನ್ನು, ಸ್ವಭಾವವನ್ನು ನಿಜವಾಗಿ ತಿಳಿದಿದ್ದ ಋಷಿಗಳ ಸಹಾಯದಿಂದ ಇದರ ರಹಸ್ಯವನ್ನು ಅರ್ಥಮಾಡಿಕೊಳ್ಳಬೇಕು. ಆದ್ದರಿಂದ ಇದನ್ನು 'ಶ್ರುತಿ' ಎಂದು ಕರೆಯುತ್ತಾರೆ.

'ಉಪನಿಷತ್ತು' ಎಂದರೆ ಗುರುಗಳ ಸಮೀಪದಲ್ಲಿ ಕುಳಿತು ಅವರಿಂದ ನಾವು ತಿಳಿದುಕೊಳ್ಳುವ 'ಜ್ಞಾನ'.



## ಹಿಂದೂಗಳ ಕರ್ತವ್ಯ

1. ಪ್ರತಿದಿನ ಬೆಳಗಾಗುತ್ತಲೇ ಮಂತ್ರವನ್ನು ಜಪಿಸುವುದು. ಅನಂತರ ಅಂದಿನ ಕೆಲಸಕಾರ್ಯಗಳಲ್ಲಿ ತೊಡಗುವುದು.
2. ಯೋಗಾಸನವನ್ನು ಅಭ್ಯಾಸ ಮಾಡುವುದು.
3. ಕಾರ, ಹುಳಿ, ಕಡಿಮೆ ಎಣ್ಣೆ ಅಂಶವಿರುವ ಆಹಾರವನ್ನು ಮಿತವಾಗಿ ಸೇವಿಸುವುದು.
4. ಬಿಡುವಿನ ವೇಳೆಯಲ್ಲಿ ಯಾವುದಾದರೂ ಆಧ್ಯಾತ್ಮಿಕ ಗ್ರಂಥಗಳನ್ನು ಓದುವುದು ಅಥವಾ ಆಧ್ಯಾತ್ಮಿಕ ಧ್ವನಿಸುರುಳಿಯನ್ನು ಕೇಳುವುದು.
5. ಆಗಾಗ್ಗೆ ಮಂತ್ರವನ್ನು ಜಪಿಸಿ ಭಗವಂತನನ್ನು ನೆನಪಿಸಿಕೊಳ್ಳುವುದು.
6. ತನ್ನ ತಪ್ಪುಗಳನ್ನು ತಿದ್ದಿಕೊಂಡು ಭಗವಂತನಲ್ಲಿ ಪಶ್ಚಾತ್ತಾಪ ವ್ಯಕ್ತಪಡಿಸುವುದು.
7. ಧಾರ್ಮಿಕ ಸೇವೆಯಲ್ಲಿ ನಿರತರಾಗಿ ಪುಣ್ಯ ಗಳಿಸುವುದು.

ಹೀಗೆ ನಿರಂತರವಾಗಿ ಸೇವೆ ಮಾಡುತ್ತಾ ಇದ್ದರೆ ಈ ಜನ್ಮದ ಜೀವನದಲ್ಲಿ ಜಯಶಾಲಿಗಳಾಗುತ್ತೀರಿ. ಮುಂದಿನ ಜನ್ಮಕ್ಕೆ ಮಾರ್ಗ ಸುಲಭವಾಗುತ್ತದೆ.

## ತಾಯಿ–ತಂದೆಯವರ ಕರ್ತವ್ಯ

ಬೆಳಗಾಗ ಎದ್ದು ಮುಖ ತೊಳೆದು ಶುಚಿಯಾಗಿ ಮನಸ್ಸಿನಲ್ಲಿ ದೇವಾಲಯವನ್ನು ಸ್ಮರಿಸಿ ಭಗವಂತನ ಚರಣಕಮಲಗಳಿಗೆ ಹೂಗಳನ್ನು ಅರ್ಪಿಸಬೇಕು. ಮಂತ್ರವನ್ನು ಜಪಿಸಬೇಕು. ಇದರಿಂದ ಕಷ್ಟಕಾರ್ಪಣ್ಯಗಳೆಲ್ಲವೂ ದೂರವಾಗುತ್ತವೆ. ಅನಂತರ ಕೈಗೊಳ್ಳುವ ಕಾರ್ಯ ಸುಗಮವಾಗುತ್ತದೆ. ಆತ್ಮವು ತೃಪ್ತಿ ಹೊಂದುತ್ತದೆ. ಮಕ್ಕಳಿಗೆ ಹೀಗೆಯೇ ಆಚರಿಸಲು ಸ್ಫೂರ್ತಿ ನೀಡಿದರೆ ಅವರ ಭವಿಷ್ಯವು ಸುಖಮಯವಾಗಿ ಜೀವನ ಅಮೂಲ್ಯವಾಗಿ ಬದಲಾವಣೆಯಾಗುತ್ತದೆ.

## ಕೋಪಕ್ಕಿಂತಲೂ ಪ್ರೀತಿ ಲೇಸು

ನಿಮ್ಮೊಂದಿಗೆ ಕೋಪಗೊಳ್ಳುವವರಿಗೆ ಅದಕ್ಕೆ ಬದಲಾಗಿ ಕೋಪವನ್ನೇ ಏಕೆ ತೋರಿಸಬೇಕೆಂದು ಯೋಚಿಸಿ. 'ಮುನಿವಂಗೆ ಮುನಿಯದಿರಿ' ಎಂಬ ಹಿತೋಕ್ತಿ ಇದೆ. ಮೌನವನ್ನು, ಪ್ರೀತಿಯನ್ನು, ಒಳ್ಳೆಯ ಮಾತುಗಳನ್ನು ಪ್ರತಿಫಲವಾಗಿ ಕೊಡಬಹುದಲ್ಲವೆ ! ಇದಕ್ಕಿಂತಲೂ ಮಿಗಿಲಾದದ್ದು ಬೇರೊಂದು ಇದೆ. ಅವರಿಗಾಗಿ ದೇವರಲ್ಲಿ ಪ್ರಾರ್ಥನೆ ! ಶ್ರೀಗಂಧವನ್ನು ತೇಯ್ದು ಬೇರೊಬ್ಬರಿಗೆ ಕೊಡುವಾಗ ಅದನ್ನು ಕೊಡುವವರ ಕೈ ಮತ್ತು ಪಡೆಯುವವರ ಕೈ ಎರಡೂ ಸುಗಂಧವನ್ನು ಬೀರುತ್ತದೆ ಅಲ್ಲವೆ !